# ವಿವಿಧ ಪಾತ್ರಕ್ಕೆ ಸಿನಿಮಾ ಚಂದ




★ *ಬಣ್ಣದ ಮೇಲಿನ ಪ್ರೀತಿ ಹುಟ್ಟಿದ್ದು ಎಲ್ಲಿಂದ?*

ನಮ್ಮದು ಮೂಲತಃ ಮೈಸೂರು. ಅಪ್ಪ ಶ್ರೀನಿವಾಸನ್ ಪ್ರಾಧ್ಯಾಪಕರಾಗಿದ್ದರು. ಈಗ ಸೇವೆಯಿಂದ ಅವರು ನಿವೃತ್ತರಾಗಿದ್ದಾರೆ. ಅಮ್ಮ ನಾಗರತ್ನ ಬ್ಯಾಂಕ್ ವ್ಯವಸ್ಥಾಪಕಿ. ಬೆಂಗಳೂರಿನ ಹನುಮಂತನಗರದ ಬ್ರಾಂಚ್‌ನಲ್ಲಿದ್ದಾರೆ. ಮೂರು ವರ್ಷದಿಂದ ಬೆಂಗಳೂರಿಗೆ ಬಂದು ನೆಲೆಸಿದ್ದೇವೆ. ನಾನು 10 ವರ್ಷದವಳಿದ್ದಾಗ ಅಂದರೆ 5ನೇ ತರಗತಿ ಮುಗಿದ ಸಂದರ್ಭದಲ್ಲಿ ಬೇಸಿಗೆ ರಜೆಯಲ್ಲಿ ಮಂಡ್ಯ ರಮೇಶ್ ಅವರ 'ನಟನ' ತಂಡದ ವತಿಯಿಂದ 'ರಜಾ ಮಜಾ' ಎಂಬ ಬೇಸಿಗೆ ಶಿಬಿರವನ್ನು ಆಯೋಜಿಸಿದ್ದರು. ಅದರಲ್ಲಿ ಭಾಗವಹಿಸಿದ್ದೆ. ಅದಾದ ಮೇಲೆ ನಾಟಕದ ಬಗ್ಗೆ ಪ್ರೀತಿ ನನ್ನಲ್ಲಿ ಮೊಳಕೆಯೊಡೆಯಿತು. ನಂತರದ ದಿನಗಳಲ್ಲಿ ವಿವಿಧ ನಾಟಕಗಳಲ್ಲಿ ಅಭಿನಯಿಸಿದೆ. ಇದುವರೆಗೂ ಸುಮಾರು ಎರಡು ಸಾವಿರಕ್ಕಿಂತ ಅಧಿಕ ನಾಟಕ ಪ್ರದರ್ಶನಗಳನ್ನು ನೀಡಿದ್ದೇನೆ.

ರಂಗಚಟುವಟಿಕೆಯಲ್ಲಿ ತೊಡಗಿಕೊಂಡ ನಂತರ 'ನೀರು ದೋಸೆ' 'ಸಿದ್ಲಿಂಗು' 'ವೀರಭಾಹು' ಸಿನಿಮಾದಲ್ಲಿ ನಟಿಸಿದೆ. ಇದಕ್ಕೂ ಮುನ್ನ 'ಹಳ್ಳಿಯ ಮಕ್ಕಳು' ಎಂಬ ಕಲಾತ್ಮಕ ಸಿನಿಮಾದಲ್ಲಿ ನಟಿಸಿದ್ದೆ. ಅಂಜಲಿ ನನ್ನ ಮೊದಲ ಧಾರಾವಾಹಿ. ನನಗೆ ಟಿವಿ ಅಷ್ಟು ಇಷ್ಟ ಆಗುವುದಿಲ್ಲ. ಸಿನಿಮಾದಲ್ಲಿಯೇ ನಟಿಸಬೇಕು. ರಂಗಭೂಮಿಯಲ್ಲಿ ಕಲಿಯಬೇಕು ಎನ್ನುವುದು ನನ್ನ ಆಶೆ. 'ತಕ್ಷ್' ಎಂಬ ರಂಗ ಸಂಸ್ಥೆಯನ್ನು ನನ್ನ ಸ್ನೇಹಿತರೆಲ್ಲಾ ಸೇರಿ ಮಾಡಿಕೊಂಡಿದ್ದೇವೆ. ಅದರ ಮೂಲಕ ರಂಗ ಕಾರ್ಯವನ್ನು ಮಾಡುತ್ತಿದ್ದೇವೆ. 'ತ್ರಿ ರೋಜಸ್' ಎಂಬ ನಾಟಕವನ್ನು ಇತ್ತೀಚೆಗೆ ಆಡಿದೆವು.

★ *ಟಿವಿಯಲ್ಲಾದರೆ ನಿತ್ಯವೂ ಮನೆ ಮನೆ ತಲುಪುವ ಜೊತೆಗೆ ಮನೆ ಮಾತಾಗುವ ಸಾಧ್ಯತೆ ಇದೆ ಇಲ್ವಾ?*

ಹಾಗೆ ಅಂತ ಅಲ್ಲ. ಟಿವಿಯಲ್ಲಿ ವೈವಿಧ್ಯತೆ ಇದೆ ಅಂತ ಅನ್ನಿಸುವುದಿಲ್ಲ. ಧಾರಾವಾಹಿಗಳ ಕಾಲಾವಧಿ ಹೆಚ್ಚಾಗುತ್ತದೆ. ಪಾತ್ರವೂ ಏಕತಾನತೆ ಅನ್ನಿಸುತ್ತದೆ. ಕೆಲವೊಮ್ಮೆ ಪಾತ್ರಕ್ಕೆ ಬ್ರಾಂಡ್ ಆಗುವ ಅಪಾಯ ಕೂಡ ಇದೆ. ಸಿನಿಮಾದಲ್ಲಿ ಆದರೆ ಹೆಚ್ಚೆಂದರೆ ಆರು ತಿಂಗಳಲ್ಲಿ ಮುಗಿದು ಹೋಗುತ್ತದೆ. ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸಲು ಅವಕಾಶ, ಸಮಯ ಸಿಗುತ್ತದೆ. ಧಾರಾವಾಹಿಯಲ್ಲಾದರೆ ಮೂರು ನಾಲ್ಕು ವರ್ಷ ಒಂದೇ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು. ಇದು ನನಗೆ ಒಂದು ರೀತಿಯಲ್ಲಿ ಮಿತಿ ಅನ್ನಿಸುತ್ತದೆ. ಒಬ್ಬೊಬ್ಬರ ಅಭಿರುಚಿ ಒಂದೊಂದು ರೀತಿ ಇರುತ್ತದೆ. ಕೆಲವರಿಗೆ ಟಿವಿ ಇಷ್ಟ ಆಗಬಹುದು. ನನಗೆ ವಿವಿಧ ಪಾತ್ರಗಳ ಸಾಧ್ಯತೆ ಸಿನಿಮಾದಲ್ಲಿ ಹೆಚ್ಚು ಅನ್ನಿಸಿದ್ದರಿಂದ ಅದೇ ಇಷ್ಟ.

★ *ಸಾಕ್ಷಿ ಪಾತ್ರ ಹೇಗೆನಿಸುತ್ತದೆ?*

ತುಂಬಾ ಸ್ವಾಭಿಮಾನದ ಪಾತ್ರ. ತನ್ನ ಹಕ್ಕು ಸ್ಥಾಪನೆಗಾಗಿ ಆಕೆ ನಿರಂತರ ಹೋರಾಡುತ್ತಾಳೆ. ಎಷ್ಟೇ ವಿರೋಧಗಳಿದ್ದರೂ ಆಕೆ ಎದುರಿಸುತ್ತಾಳೆ. ಒಂದು ರೀತಿಯಲ್ಲಿ ಹಠಮಾರಿ ಸ್ವಭಾವದವಳು. ಆ ಪಾತ್ರಕ್ಕೂ ನನಗೂ ತುಂಬಾ ವ್ಯತ್ಯಾಸ ಇದೆ. ವೈಯಕ್ತಿಕವಾಗಿ ನಾನು ಯಾವುದೇ ಒತ್ತಡಕ್ಕೂ ಮಣಿಯುವುದಿಲ್ಲ. ನನ್ನ ನಂಬಿಕೆಗೆ ಬದ್ಧಳಾಗಿರುತ್ತೇನೆ. ಆದರೆ ಸಾಕ್ಷಿ ಕುಟುಂಬದ ಭಾವನಾತ್ಮಕ ಒತ್ತಡಕ್ಕೆ ಮಣಿಯುತ್ತಾಳೆ. ಉಳಿದಂತೆ ತುಂಬಾ ಒಳ್ಳೆಯ ಹೆಣ್ಣುಮಗಳು.

★ *ಕೌಟುಂಬಿಕ ಬೆಂಬಲ ಹೇಗಿದೆ?*

ನಮಗೆ ತಂದೆ– ತಾಯಿಯಿಂದ ಒತ್ತಡ ಇಲ್ಲ. ಶಾಲಾ ದಿನಗಳಲ್ಲಿ ನನ್ನ ಅಕ್ಕ ತನ್ಮಯಿ ಮತ್ತು ನಾನು ನಟನೆಯನ್ನೇ ಆಯ್ಕೆ ಮಾಡಿಕೊಂಡಿದ್ದೆವು. ಆಕೆ 'ಸರ್ಪ ಸಂಬಂಧ' ಧಾರಾವಾಹಿಯಲ್ಲಿ ನಟಿಸುತ್ತಿದ್ದಾಳೆ. ನಾನೂ ರಂಗಭೂಮಿಯಲ್ಲಿ ಸಂಪೂರ್ಣ ತೊಡಗಬೇಕು ಎಂದು ಮುಕ್ತ ವಿಶ್ವವಿದ್ಯಾಲಯದಲ್ಲಿ ಬಿಬಿಎಂ ಮಾಡುತ್ತಿದ್ದೇನೆ. ಏನೇ ಆದರೂ ರಂಗ ಚಟುವಟಿಕೆ ನನ್ನ ಅಂತಿಮ ಗುರಿ, ಯಾವುದೇ ಅನುಮಾನ ಇಲ್ಲ.

■ ರಾಗು